<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ</u>

<u>**ನ್ಯಾಯಾಲಯ, ಪಿರಿಯಾಪಟ್ಟಣ.**</u>

<u>ಸಿ.ಸಿ.2350/2021</u>

ಪಿರ್ಯಾದುದಾರರು : ಕೆ.ಎನ್.ರೇವೆಗೌಡ,

ವಿರುದ್ಧ

ಆರೋಪಿ : ನೀಲಮ್ಮಾ ಕೋಂ. ಪಾಲಾಕ್ಷ ಯಾನೆ ಮಲ್ಲೇಶ,
ವಯಸ್ಸು ಸುಮಾರು 55 ವರ್ಷ.
ವಾಸಃ ಊರುಗುತ್ತಿ ಗ್ರಾಮ,
ಕೊಡ್ಲಿಪೇಟೆ ಹೋಬಳಿ,
ಸೋಮವಾರಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

<u>ಆರೋಪಣೆ</u>

ಶ್ರೀ ಯೋಗೇಶ.ಎಂ.ಆರ್, ಬಿ.ಎ., ಎಲ್.ಎಲ್.ಬಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಅಪಾದನೆಯನ್ನು ಹೊರಿಸುತ್ತಿದ್ದೇನೆ. ಆರೋಪಿಯಾದ ನೀವು ಫಿರ್ಯಾದಿಗೆ ನೀಡಬೇಕಾಗಿದ್ದ ಹಣದ ಮರುಪಾವತಿಗಾಗಿ ಕರ್ನಾಟಕ ಬ್ಯಾಂಕ್, ಕೊಡ್ಲಿಪೇಟೆ ಶಾಖೆಯಲ್ಲಿನ ನಿಮ್ಮ ಖಾತೆಯ ಚೆಕ್ ಸಂಖ್ಯೆ 394658 ಅನ್ನು ರೂ.2,00,000/- ಹಣಕ್ಕೆ ದಿನಾಂಕಃ 20.03.2021 ರಂದು ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ತಿಳಿಸಿದ್ದು, ಸದರಿ ಚೆಕ್ಕನ್ನು ಫಿರ್ಯಾದಿಯು ಕೆನರಾ ಬ್ಯಾಂಕ್ ಪಿರಿಯಾಪಟ್ಟಣ ಶಾಖೆಗೆ ನಗದೀಕರಣಕ್ಕೆ ಸಲ್ಲಿಸಿದ್ದು, ಸದರಿ ಚೆಕ್ ನಿಮ್ಮ ಖಾತೆಯು **"Funds insufficient"** ಎನ್ನುವ ಹಿಂಬರಹದೊಂದಿಗೆ ಅಮಾನ್ಯವಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಫಿರ್ಯಾದಿಯು ನೋಂದಾಯಿತ ಅಂಚೆ ಮುಖಾಂತರ ನಿಮಗೆ ನೋಟೀಸು ನೀಡಿದ್ದು, ಸದರಿ ನೊಟೀಸು ನಿಮಗೆ ತಲುಪಿದ್ದರೂ, ನೀವು ಫಿರ್ಯಾದಿಗೆ ನೀಡಬೇಕಾಗಿದ್ದ ಹಣವನ್ನು ನಿಗದಿತ ಅವಧಿಯೊಳಗೆ ಮರುಪಾವತಿ ಮಾಡದೇ ಇರುವುದರಿಂದ, ಆರೋಪಿತರಾದ ನೀವು ನನ್ನ ಸಂಜ್ಞೆಯೊಳಗೆ ವರ್ಗಾವಣೀಯ ಸ್ವತ್ತುಗಳ ಅಧಿನಿಯಮ ಕಲಂ.138 ರ ಅಡಿಯಲ್ಲಿ ಅಪರಾಧ ಮಾಡಿದ್ದೀರಿ ಎಂದು ಆರೋಪಿಸಲಾಗಿದೆ.

ಪ್ರಶ್ನೆ 1 : ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿರುತ್ತದೆಯೇ?

ಉ : ತಿಳಿಯಿತು.

ಪ್ರಶ್ನೆ : ಈಗ ಓದಿ ಹೇಳಿದ ಆರೋಪಣೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯನ್ನು ಬಯಸುವಿರೋ?

ಉ :

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕ*:*

*(ಯೋಗೇಶ.ಎಂ.ಆರ್.)*
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ಪಿರಿಯಾಪಟ್ಟಣ

ಆರೋಪಿಯ ಸಹಿ